ಮನೆಕಡೆ ನಡೆದು ಹೊರಟಳು. ಒಂದಿಷ್ಟು ಸಮಯ ಹೀಗೆಯೇ ಸರಿಯಿತು.

ನನಗೆ ರಾಘವಾಚಾರ್ಯರನ್ನು ಭೇಟಿಯಾಗಬೇಕೆನಿಸಿತು. ಮನೆಯಿಂದ ಸಾವಕಾಶವಾಗಿ ಇಳಿದು ಓಣಿಗಳ ಕಡೆ ಬಂದೆ. ನಡೆದುಬರುತ್ತಿದ್ದಂತೆ ನನ್ನ ಕಣ್ಣುಗಳನ್ನೇ ನಂಬಲಾಗಲಿಲ್ಲ. ಎಲ್ಲ ಮನೆಗಳ ಬಾಗಿಲಲ್ಲಿ ಉರಿಯುವ ಹಣತೆಗಳನ್ನಿಟ್ಟಿದ್ದಾರೆ. 'ತಂಗಿಯ ಮನೆ ಸ್ವಾಗತ' ಎಂದು ಬರೆದಿದ್ದಾರೆ. ಭಾಗಜ್ಜಿ, ಇಡೀ ಊರೇ ಬೆಳಗುವಂತೆ ಮಾಡಿದ್ದಾಳೆ.

ಇದೀಗ ಬೆಳಕಾದಂತೆ ಹುಡುಗರು ಲವಲವಿಕೆಯಿಂದ ಓಣಿಗಳಲ್ಲೆಲ್ಲಾ ಓಡಾಡುತ್ತಿದ್ದಾರೆ. ಎಲ್ಲ ಕಡೆಯೂ ದೀಪಗಳು ಉರಿಯುತ್ತಿವೆ. 'ತಂಗಿಯ ಮನೆಸ್ವಾಗತ' ಎಂದು ಎಲ್ಲ ಮನೆಗಳ ಮೇಲೆಯೂ ಬರೆದಿದೆ. ಅವೆಲ್ಲ ತಂಗಿಯ ಆಗಮನಕ್ಕಾಗಿ ಕಾದಿವೆ. ನನ್ನ ಕಣ್ಣುಗಳಲ್ಲಿ ನನಗೆ ಅರಿವಿಲ್ಲದಂತೆ ಕಣ್ಣೀರು ಹರಿದುಹೋಗುತ್ತಿದ್ದವು.

★★★

ರಾಘವಾಚಾರ್ಯರು ಸ್ಮಶಾನದಿಂದ ಮನೆಗೆ ಬಂದಾಗ ಆಗಲೇ ಸಂಜೆಯ ಕತ್ತಲು ಕವಿದಿತ್ತು. ಬಂದವರೇ ಮನೆಯ ಹೊರಗಡೆಯೇ ಸ್ನಾನ ಮಾಡಿ, ಮಡಿ ಬಟ್ಟೆ ಉಟ್ಟು ಒಳಗಡೆ ಹೋದರು. ತಾವು ವಾಸಿಸುವ ಏಕಾಂತದ ಕೋಣೆಗೆ ಹೋದರು. ಒಂದು ಸಣ್ಣ ಟೇಬಲ್, ಕುರ್ಚಿ ಹಾಗು ಪಲ್ಲಂಗಗಳಿದ್ದವು. ಹೋದವರು ಟೇಬಲ್ ಎದುರುಗಡೆಯ ಕುರ್ಚಿಯಲ್ಲಿ ಕುಳಿತರು. ಕೋಣೆಯಲ್ಲಿ ಕಡಿಮೆ ವೋಲ್ಟೇಜ್ ಬಲ್ಬು ಉರಿಯುತ್ತಿತ್ತು. ಅವರು ಬೆಳಕಲ್ಲಿ ಕುಳಿತಿದ್ದಾರೊ, ಕತ್ತಲಲ್ಲಿದ್ದಾರೋ ಹೇಳುವುದೇ ಕಷ್ಟವಾಗಿತ್ತು. ಕಣ್ಣುಗಳೇ ಇಲ್ಲದ ಆ ಬಲ್ಬು ಕತ್ತಲೆಯು ಇನ್ನೂ ಸ್ಪಷ್ಟವಾಗಿ ಗೋಚರಿಸುವಂತೆ ಮಾಡಿತ್ತು. ಅವರಿಗೆ ದಿನದ ವಿದ್ಯಮಾನಗಳೆಲ್ಲ ಕೊಂಡಿಯಂತೆ ಚುಚ್ಚುತ್ತಿದ್ದವು. ರಮೇಶನ ಜೊತೆಗಿನ ಗರುಡಪುರಾಣದ ಚರ್ಚೆ, ಅವನ ಮುಖದ ಮೇಲಿನ ಪ್ರತಿಕ್ರಿಯೆಗಳು, ಸ್ಮಶಾನದಲ್ಲಿಯ ದೃಶ್ಯಗಳು ಅವರನ್ನು ಕ್ಷೋಭೆಗೀಡು ಮಾಡಿದ್ದವು. ಪ್ರತಿಬಾರಿ ನಡೆದ ಸಾವಿನ ಘಟನೆಗಳು, ಅವರನ್ನು ಭಯಾನಕ ರೀತಿಯಲ್ಲಿ ಆತಂಕಕ್ಕೀಡುಮಾಡುತ್ತಿದ್ದವಲ್ಲದೆ, ಅವರು ಅವುಗಳನ್ನು ತಕ್ಷಣ ಮರೆಯಲು ಪ್ರಯತ್ನಿಸುತ್ತಿದ್ದರು. ಸಾವು ಅವರನ್ನು ಎಷ್ಟು ತಲ್ಲಣಗೊಳಿಸುತ್ತಿದ್ದೆಂದರೆ, ಸತ್ತ ತಂದೆ ತಾಯಿಯ ಒಂದು ಭಾವಚಿತ್ರವನ್ನು ಕೂಡ ಅವರು ಗೋಡೆಯ ಮೇಲೆ ಹಾಕಿರಲಿಲ್ಲ. ಸತ್ತದ್ದು ಸತ್ತದ್ದಷ್ಟೆ, ಅದನ್ನು ತಕ್ಷಣ ವಿಲೇವಾರಿ ಮಾಡಿ, ಅದರ ಪಿಂಡಕಾರ್ಯಗಳಿಗೆ ತೊಡಗಿ, ಗರುಡ ಪುರಾಣದ ಆಜ್ಞೆಯಂತೆ ಕಾರ್ಯಗಳನ್ನು ಮಾಡಿ ಮುಗಿಸುವುದು ಮಾತ್ರ, ಅವರ ಮುಂದಿರುವ ತಕ್ಷಣದ ತುರ್ತು ವಿಚಾರಗಳಾಗಿರುತ್ತಿದ್ದವು. ಅವರು ಟೇಬಲ್ ಎದುರು ಕುರ್ಚಿಯ ಮೇಲೆ ಕುಳಿತಿದ್ದರು, ಯಾರೋ ಹಿಂದುಗಡೆ ಇದ್ದಂತೆನಿಸಿ ಮರಳಿ ನೋಡಿದಾಗ ಹಿಂದಿನ ಗೋಡೆಯ ಮೇಲೆ ಬೃಹದಾಕಾರವಾಗಿ ಯಾರೋ ಕುಳಿತಿದ್ದರು. ಒಮ್ಮೆಲೇ ಬೆಚ್ಚಿಬಿದ್ದು, ತಕ್ಷಣ ಎದ್ದು ನಿಂತರು, ದಿಟ್ಟಿಸಿ ನೋಡಿ ಮುಟ್ಟಲು ಹೋದರು. ಅದನ್ನು ಮುಟ್ಟುತ್ತಿದ್ದಂತೆ ಅದು ತಾವೇ ಆಗಿದ್ದರು, ಮತ್ತೆ ಮರಳಿ ಕುರ್ಚಿಗೆ ಕೂಡ್ರಲು ಬಂದಾಗ, ಆಗಲೇ ಕುರ್ಚಿಯಲ್ಲಿ ಯಾರೋ ಕುಳಿತಿದ್ದರು. ಹೌಹಾರಿದ ಅವರು ಕುರ್ಚಿ ಎಳೆದಾಡ ಹತ್ತಿದರು. ಕುರ್ಚಿಯಲ್ಲಿ ಯಾರೂ ಇರಲಿಲ್ಲ. ಮತ್ತೆ ಟೇಬಲ್ ಎದುರು ಹೋಗಿ ಕುಳಿತರು. ಹಳೆಯ ಟೇಬಲ್ ಇವರ ಕೈಗಳ ಒತ್ತಡದಲ್ಲಿ ನರಳಿದಾಗ, ದೇಹದಲ್ಲಿಯ ನರಗಳು ಹರಿದಂತಾದವು. ಒಂದು ಉದ್ದಾದ ನಿಟ್ಟುಸಿರುಬಿಟ್ಟರು. ಅದು ಆವಿಯಂತೆ ಕೋಣೆಯನ್ನು ಆವರಿಸಿತು. ಕಣ್ಣಿಗೆ ಬವಳಿ ಬಂದಂತೆನಿಸಿ ಮೇಲ್ಛಾವಣಿಯ ಕಡೆ ನೋಡಿದರು. ತಮ್ಮ ಮನೆತನದ ಹಿರಿಯರೆಲ್ಲ ಅಲ್ಲಿ ಗುಂಪಾಗಿ ಕುಳಿತಂತೆನಿಸಿ, ಅವರೆಲ್ಲ